ಅಂದುಕೊಂಡುಬಿಟ್ಟಿರುತ್ತೇವೆ.'

ಎದುರಿನ ಚೇರ್‌ನ ಶಂಕರ ಹೇಳುತ್ತಿದ್ದ 'ನಾವು ಮಕ್ಕಳು ಹುಟ್ಟಿದ ಕೂಡಲೇ ನಾವೇ ಅವರ ತಾಯಿ ತಂದೆಯರು. ನಮ್ಮ ಮೇಲೆ ಅವರ ಎಲ್ಲಾ ಜವಾಬ್ದಾರಿ ಇದೆ ಅಂತ ಅಂದುಕೊಂಡು ಬಿಟ್ಟಿರುತ್ತೇವೆ. ಆದರೆ, ಬೆಳೆದ ನಂತರ ಮಕ್ಕಳಿಗೆ ಆ ಭಾವನೆ ಇರಬೇಕು ಅಂತ ಏನಿದೆ ಹೇಳಿ?'

ಮೂಲೆ ಚೇರ್‌ನ ಶ್ರೀನಿಧಿ ಹೇಳುತ್ತಿದ್ದ 'ಅದಲ್ಲರೀ. ಮಕ್ಕಳು ಹುಟ್ಟುವ ಮೊದಲೇ ಅವರ ಬದುಕಿನ ನಕ್ಷೆ ನಾವು ಬರೆದಿಟ್ಟು ಅವರು ಹಾಗೇ ಬೆಳೆಯಲಿ, ಬಾಳಲಿ ಅಂತ ಅದಕ್ಕೆ ಸರಿಯಾಗಿ ನಾವು ನಿರ್ವಹಿಸುತ್ತೇವೆ. ನಮ್ಮದು ಅನ್ನೋದನ್ನೆಲ್ಲ ಅವರು ಹುಟ್ಟಿದ ಕೂಡಲೇ ಮರೆತು ಬಿಟ್ಟು ಅವರೇ ನಮ್ಮ ಬದುಕು ಭವಿಷ್ಯ ಅಂತ ಅಂದುಕೊಂಡು ಸಂಪೂರ್ಣ ತ್ಯಾಗಕ್ಕೆ ನಮ್ಮ ಬದುಕನ್ನೇ ಕೊಟ್ಟುಬಿಡುತ್ತೇವೆ. ಆದರೆ, ಅವರು ದೊಡ್ಡವರಾಗುತ್ತಿದ್ದಂತೆಯೇ ಇದನ್ನೆಲ್ಲಾ ಮರೆತುಬಿಡುತ್ತಾರೆ ಅಂತ ಕಾಣಿಸುತ್ತೆ ಅಥವಾ ಅವರಿಗೆ ಅಂತಹ ಭಾವನೆಗಳೆಲ್ಲ ಬರುವುದೇ ಇಲ್ಲವೇನೋ... ನಾವೆಲ್ಲ ಒಂದು ರೀತಿ ಭ್ರಮೆಯಲ್ಲಿ ಬಾಳುತ್ತಿದ್ದೇವೆ ಅನ್ನಿಸೋಲ್ವ?'

ಸುಂದರ್‌ನ ಮನಸ್ಸು ಪೂರ್ತಿ ಅಲ್ಲೋಲ ಕಲ್ಲೋಲವಾಗಿಬಿಟ್ಟಿತು. ಹದಿನೈದು ದಿನಗಳಲ್ಲಿ ಅವನ ತೂಕವೂ ಕಡಿಮೆ ಆಗಿಬಿಟ್ಟಿತು. ಸಂಜೆ 6 ಗಂಟೆಯಾದರೆ ಸಾಕು, ಬಸ್‌ನಲ್ಲಿರಲಿ, ಕಚೇರಿಯಲ್ಲಿರಲಿ... ಮಕ್ಕಳು ಆಡಿದ ಮಾತು ಅವನ ಎದೆಯನ್ನು ಒತ್ತತೊಡಗಿತ್ತು. ಸುಮತಿ ಮಾತ್ರ ಏನೂ ಆಗದವಳಂತೆ ಬೆಳಿಗ್ಗೆಯಾದರೆ ಅಡುಗೆ, ಸಂಜೆಯಾದರೆ ತಿಂಡಿ ಎಂದು ತನ್ನ ಕೆಲಸದಲ್ಲಿ ಎಂದಿನಂತೆ ಮುಳುಗಿರುತ್ತಿದ್ದಳು. ಎಲ್ಲೋ ಅವಳಿಗೆ ಅವನ ಚಿಂತೆ ಗಮನಕ್ಕೆ ಬಂದಿರಬೇಕು.

'ಯಾಕ್ರೀ ಈ ನಡುವೆ ಒಂದು ತರಹ ಇರ್ತೀರಾ. ಆರೋಗ್ಯದಲ್ಲಿ ಸಮಸ್ಯೆ ಇದ್ದರೆ ನಾಳೇನೇ ಡಾಕ್ಟರ್ ಹತ್ತಿರ ಹೋಗಿ ಬರೋಣವೇ' ಅಂದಳು.

'ಬೇಡ ಎರಡು ದಿನ ರಜ ಹಾಕ್ತೀನಿ' ಅಂದ. ಅವಳ ಜೊತೆ ಮಾತನಾಡಿ ಸಮಸ್ಯೆಯಿಂದ ಹೊರಗೆ ಬರಬೇಕು ಎಂದೆನ್ನಿಸಿತ್ತು ಅವನಿಗೆ.

ಮರುದಿನ ರಜಹಾಕಿ ಸಂಜೆ ಮನೆಗೆ ಬರುವಾಗಲೇ ಸ್ವೀಟ್ಸ್ ಅಂಗಡಿಯಿಂದ ಫೇಡೆ ಮತ್ತು ಬೇಲ್‌ಪುರಿ ತಂದ. ಮಕ್ಕಳು ಕೂಡ 'ಇವತ್ತೇನು ಅಪ್ಪ ಬೇಗ ಬಂದಿದ್ದೂ ಅಲ್ಲದೇ ತಿಂಡೀನೂ ತಂದಿದ್ದಾರೆ' ಅಂತ ಸಂಭ್ರಮಪಟ್ಟರು. ಅವರಿಗೆ ತಮ್ಮ ಮಾತು ಅಪ್ಪನ ಕರುಳನ್ನು ಕುಯ್ಯುತ್ತಿದೆ ಎಂಬ ಅರಿವು ಕೂಡ ಇರಲಿಲ್ಲ.

'ಎರಡು ದಿನ ರಜ ಹಾಕಿದ್ದೀನಿ' ಅಂದ ಸುಂದರ್. ಧ್ವನಿಯಲ್ಲಿ ಉತ್ಸಾಹ ಇರಲಿಲ್ಲ.

'ಓ... ಅಮ್ಮನ ಜೊತೆ ಸೆಕೆಂಡ್ ಹನಿಮೂನಾ' ಅಂತ ಇಬ್ಬರೂ ಗೇಲಿ ಮಾಡಿದರು.

'ಸ್ವಲ್ಪ ಸುಮ್ಮನಿರ್ತೀರಾ ಸಾಕು. ಯಾವಾಗ ಏನು ಮಾತಾಡಬೇಕು ಅಂತ ತಿಳಿಯಲ್ಲ ನಿಮಗೆ! ಇಷ್ಟು ದೊಡ್ಡವರಾಗಿದ್ದೀರಿ...' ಅಡುಗೆ ಮನೆಯಿಂದ ಗದರಿಕೆ ಬಂದಿತು. ಕೂಡಲೇ ಮಗಳು ಅಪ್ಪನ ಕಡೆ ಬಗ್ಗಿ ಕಿವಿಯಲ್ಲಿ 'ಅಪ್ಪ... ಅಮ್ಮ ಸುಮ್ಮನೇ ಹೇಳ್ತಾಳೆ ಅಷ್ಟೆ. ಆದ್ರೆ ಒಳಗೇ ಖುಷಿಪಡ್ತಾಳೆ. ನಾವು ಹೀಗಾಡಿದ್ರೆ ಅವಳಿಗೆ ಇಷ್ಟ' ಅಂದಳು.

ಸುಂದರ್‌ಗೆ ತನಗಿಂತ ಮಗಳೇ ತಾಯಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾಳೆ ಅನ್ನಿಸಿ ಪಿಚ್ಚೆನ್ನಿಸಿತು.

ಮರುದಿನ ಮಧ್ಯಾಹ್ನ ಊಟ ಮುಗಿಸಿ ಮಲಗಿದ್ದಾಗ ಸುಮತಿ ಪಕ್ಕದ ರೂಮಿನಲ್ಲಿ ತಂಬೂರಿ ಮೀಟಿಕೊಂಡು ಮೆಲ್ಲಗಿನ ಧ್ವನಿಯಲ್ಲಿ ಹಾಡುತ್ತಿರುವುದು ಕೇಳಿಸಿತು. ಎದ್ದು ಅವಳಿದ್ದ ಕಡೆ ಹೋದ.